# ಬೆಲ್ಟ್ ಡ್ರೆಸ್; ಯುವತಿಯರು ಖುಷ್!

**ಫ್ಯಾಷನ್ ಜಗತ್ತಿನಲ್ಲಿ ನಿತ್ಯವೂ ಬದಲಾವಣೆಯಾಗುತ್ತಲೇ ಇರುತ್ತದೆ. ಉಡುಪುಗಳಲ್ಲಿ ವೈವಿಧ್ಯಮಯ ವಿನ್ಯಾಸದವು ಮಾರುಕಟ್ಟೆಗೆ ಬಂದಿದ್ದು ಶರ್ಟ್ ಅಂಡ್ ಬೆಲ್ಟ್ ಡ್ರೆಸ್ ಇದೀಗ ಹದಿಹರೆಯದವರ ಹೃದಯ ಗೆಲ್ಲುತ್ತಿದೆ.**

■ ಕವಿತಾ ವಿನು ಭಟ್

ಫ್ಯಾಷನ್ ಲೋಕದಲ್ಲಿ ದಿನನಿತ್ಯ ಬದಲಾವಣೆಯ ಗಾಳಿ ಬೀಸುತ್ತಲೇ ಇರುತ್ತದೆ. ಫ್ಯಾಷನ್ ಡಿಸೈನರ್‌ಗಳ ಸೃಜನಶೀಲತೆಯಿಂದ ತಯಾರಾಗಿರುವ ಶರ್ಟ್ ಡ್ರೆಸ್ ಮತ್ತು ಬೆಲ್ಟ್ ಡ್ರೆಸ್‌ಗಳೀಗ ಫ್ಯಾಷನ್‌ಪ್ರಿಯರಿಗೆ ಸ್ಟೈಲಿಷ್ ಲುಕ್ ನೀಡಲು ತುದಿಗಾಲಿನಲ್ಲಿವೆ. ಮೆನ್ಸ್ ವೇರ್ ಎಂದು ಕರೆಯಲ್ಪಡುತ್ತಿದ್ದ ಫಾರ್ಮಲ್ ಶರ್ಟ್, ಟೀ ಶರ್ಟ್, ಜೀನ್ಸ್‌ಗಳೀಗ ಹುಡುಗರಿಗೆ ಮಾತ್ರ ಸೀಮಿತವಾಗಿಲ್ಲ. ನಾರ್ಮಲ್ ಶರ್ಟ್‌ಗಳಿಗೆ ಫ್ಯಾಷನ್ ಟಚ್ ಕೊಟ್ಟು ಬೆಲ್ಟ್ ಡ್ರೆಸ್, ಶರ್ಟ್ ಡ್ರೆಸ್‌ಗಳೆಂಬ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಗಿದ್ದು, ಮಾಡರ್ನ್ ಮಹಿಳೆಯರ ಹಾಟ್ ಫೇವರೆಟ್ ಎನಿಸಿದೆ.

### ಬೆಲ್ಟ್ ಡ್ರೆಸ್

ಪ್ಯಾಂಟ್‌ಗಳಿಗೆ ಧರಿಸುತ್ತಿದ್ದ ಬೆಲ್ಟ್‌ಗಳೀಗ ಡ್ರೆಸ್‌ಗಳಿಗೆ ಸೇರಿಕೊಂಡು ಹೊಸ ವಿನ್ಯಾಸದಲ್ಲಿ ಮಾರುಕಟ್ಟೆಗೆ ಬಂದಿದೆ. ನವನವೀನ ವಿನ್ಯಾಸದ ಬೆಲ್ಟ್ ಡ್ರೆಸ್‌ಗಳು ಮೆಟ್ರೊ ಸಿಟಿಯ ಹುಡುಗಿಯರಿಗೆ ಸಖತ್ ಇಷ್ಟವಾಗುತ್ತಿದೆ. ಆಫೀಸ್, ಮೀಟಿಂಗ್, ಔಟಿಂಗ್, ಗೆಟ್ ಟುಗೆದರ್‌ಗಳಲ್ಲಿ ಬ್ಯುಸಿಯಾಗಿರುವ ಕಾರ್ಪೊರೇಟ್ ಕ್ಷೇತ್ರದ ಮಹಿಳೆಯರಿಗೆ ಡೀಸೆಂಟ್ ನೋಟ ಕೊಡುವಲ್ಲಿ ಯಶಸ್ವಿಯಾಗಿದೆ.

ವೈವಿಧ್ಯಮಯ ವಿನ್ಯಾಸಗಳಲ್ಲಿ ಲಭ್ಯವಿರುವ ಉಡುಪುಗಳು ಗ್ರಾಹಕರ ಆಯ್ಕೆಗೆ ತಕ್ಕಂತೆರೂಪುಗೊಂಡಿರುತ್ತವೆ. ನಿಮ್ಮಿಷ್ಟದ ಕಲರ್ ಶೇಡ್‌ಗಳಿದ್ದು ದೇಹದ ಅಳತೆಗೆ ತಕ್ಕಂತೆ ಇರುವುದರಿಂದ 'ಫಿಟ್ ಆಂಡ್ ಫೈನ್' ಆಗಿದೆ. ಕಾಂಟ್ರಾಸ್ಟ್ ಶೇಡ್‌ನ ಪೇಟೆಂಟ್ ಬೆಲ್ಟ್ ಡ್ರೆಸ್, ಪೆನ್ಸಿಲ್ ಕಟ್ ಜೀನ್ಸ್ ಜೊತೆಗೆ ಹೊಂದಿಕೆಯಾಗುವ ಆರ್ನಾಟ್ ಬಕಲ್ ಬೆಲ್ಟ್ ಡ್ರೆಸ್, ಬೂಟ್ ಕಟ್ ಮೇಲೆ ಹೊಂದಿಕೊಳ್ಳುವ ಬೊಗ್ ಬಕಲ್ ಬೆಲ್ಟ್ ಡ್ರೆಸ್ ನೋಡಲು ಚೆನ್ನಾಗಿ ಕಾಣಿಸುತ್ತದೆ. ದಪ್ಪ ಇರುವವರಿಗೆ ಡಬಲ್ ಬಕಲ್ ಬೆಲ್ಟ್ ಡ್ರೆಸ್ ಚೆನ್ನಾಗಿ ಕಾಣುತ್ತದೆ. ಸಣ್ಣಗೆ ಆಗಿರುವವರಿಗೆ ಮೈಗೆ ಅಂಟಿಕೊಂಡಿರುವ ಸ್ಕಿನ್ನಿ ಬೆಲ್ಟ್ ಡ್ರೆಸ್ ಬಳುಕುವ ಬಳ್ಳಿಯಂತಹ ನೋಟಕ್ಕೆ ಬೆಸ್ಟ್. ದಪ್ಪಗಿದ್ದು ಸಣ್ಣದಾಗಿ ಕಾಣಲು ಇಷ್ಟಪಡುವವರಿಗೆ ಲೂಪ್ ಲೇಯರ್, ಕೆವ್ ಬಕ್ಕಲ್ ಬೆಲ್ಟ್ ಡ್ರೆಸ್ ಶಾಪಿಂಗ್ ಸೆಂಟರ್‌ಗಳಲ್ಲಿ ಸಿಗುತ್ತದೆ.

ಕಾಲೇಜು ಮತ್ತು ದಿನ ನಿತ್ಯ ಆಫೀಸ್‌ಗೆ ಹೋಗುವವರಿಗೆ ಕ್ಯಾಶುವಲ್ ಬೆಲ್ಟ್ ಡ್ರೆಸ್ ಕಾಟನ್, ಲೆನಿನ್, ರೆಯಾನ್ ಫ್ಯಾಬ್ರಿಕ್‌ಗಳಲ್ಲಿ ಸಿಗುತ್ತದೆ. ಋತುಮಾನಕ್ಕೆ ತಕ್ಕಂತೆ ಫ್ಯಾಬ್ರಿಕ್ ಬದಲಾವಣೆ ಮಾಡಿಕೊಳ್ಳಬಹುದು. ಧರಿಸಲು ಸಡಿಲವಾಗಿದ್ದು ಆರಾಮದಾಯಕ ಎನಿಸುತ್ತವೆ ಇಂಥ ಉಡುಪುಗಳು.

ಗಾಜಿನಂತೆ ನುಣುಪಾದ ಪೇಟೆಂಟ್ ಲೆದರ್‌ನಿಂದ ತಯಾರಾದ ಮತ್ತೊಂದು ಡ್ರೆಸ್ ಪೇಟೆಂಟ್ ಬೆಲ್ಟ್ ಡ್ರೆಸ್. ಮಿರರ್ ಫಿನಿಶಿಂಗ್ ಹೊಂದಿರುವ, ಫಿಟ್‌ನೆಸ್ ತೋರ್ಪಡಿಸುವ ಈ ಉಡುಪು ಧರಿಸುವವರಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ. ಲೆದರ್ ಅಥವಾ ಸ್ಟೇನ್‌ಲೆಸ್ ಸ್ಟೀಲ್‌ನಿಂದ ತಯಾರಾದ ಸಾಲಿಡ್ ಬೆಲ್ಟ್ ಯಾವುದೇ ಹೈಹೀಲ್ಸ್, ಸ್ಯಾಂಡಲ್, ಶೂ ಜೊತೆಗೆ ಹೊಂದಿಕೆಯಾಗುತ್ತದೆ.



### ಒಂದಿಷ್ಟು ಟಿಪ್ಸ್

ಬೆಲ್ಟ್ ಮತ್ತು ಶರ್ಟ್ ಡ್ರೆಸ್‌ಗಳನ್ನು ಮಿಕ್ಸ್ ಆ್ಯಂಡ್ ಮ್ಯಾಚ್ ಮಾಡಿ ಧರಿಸಬಹುದು. ಜೀನ್ಸ್, ಲೆಗ್ಗಿಂಗ್ಸ್ ಸ್ಕರ್ಟ್‌ಗಳ ಜೊತೆಗೂ ಟ್ರೈ ಮಾಡಬಹುದು. ಚಳಿಗಾಲವಾದರೆ ಮೇಲೊಂದು ಜಾಕೆಟ್ ಅಥವಾ ಕೋಟ್ ಧರಿಸುವುದು ಉತ್ತಮ.

ಆಧುನಿಕ ಟಚ್ ಇರುವುದರಿಂದ ಒಡವೆ ಧರಿಸಿದರೆ ಚೆನ್ನಾಗಿ ಕಾಣುವುದಿಲ್ಲ. ಸಣ್ಣದೊಂದು ಚೈನ್ ಅಥವಾ ಚೋಕರ್, ಬ್ರೇಸ್ಲೆಟ್, ಆಂಕ್ಲೆಟ್ ಅದ್ಭುತ ನೋಟ ನೀಡುತ್ತದೆ.

### ಶರ್ಟ್ ಡ್ರೆಸ್

ಧರಿಸಲು ಸುಲಭ ಮತ್ತು ಆರಾಮದಾಯಕ ಶರ್ಟ್ ಡ್ರೆಸ್‌ಗಳೀಗ ಫ್ಯಾಷನ್‌ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ. ಕಾಟನ್ ಮತ್ತು ಖಾದಿ ಶರ್ಟ್ ಡ್ರೆಸ್‌ಗಳು ಕಾರ್ಪೊರೇಟ್ ಮಹಿಳೆಯರಿಗೆ ಅಚ್ಚುಮೆಚ್ಚು. ಉಲ್ಲನ್, ಜೀನ್ಸ್, ಲೆದರ್ ಫ್ಯಾಬ್ರಿಕ್‌ನಿಂದ ತಯಾರಾದ ಶರ್ಟ್ ಡ್ರೆಸ್‌ಗಳು ಚಳಿಯಿಂದ ರಕ್ಷಿಸಿ ಬೆಚ್ಚಗಿರಿಸುತ್ತವೆ. ಬೇಸಿಗೆಯಲ್ಲಿ ತುಂಬು ತೋಳಿನ ಡ್ರೆಸ್ ಸನ್ ಟ್ಯಾನ್‌ನಿಂದ ಕಾಪಾಡುತ್ತದೆ. ಒಟ್ಟಿನಲ್ಲಿ ಎಲ್ಲ ಕಾಲಮಾನಕ್ಕೂ ಹೊಂದಿಕೆಯಾಗುವ, ಆರಾಮದಾಯಕ, ಜೊತೆಗೆ ಫ್ಯಾಷನ್ ಸ್ಟೇಟ್‌ಮೆಂಟ್ ಮೆರೆಯಲು ಅನುಕೂಲವಾದ ಶರ್ಟ್ ಡ್ರೆಸ್‌ಗಳೀಗ ವಾರ್ಡ್‌ರೋಬ್‌ನಲ್ಲಿ ಶಾಶ್ವತ ಸ್ಥಾನ ಗಿಟ್ಟಿಸುವುದರಲ್ಲಿ ಸಂಶಯವಿಲ್ಲ.

ಚಂದದ ಲೇಯರ್‌ನಿಂದ ಕೂಡಿರುವ ಪ್ಲೇಟೆಡ್ ಶರ್ಟ್ ಡ್ರೆಸ್‌ಗಳು ಕಾಲೇಜು, ಕಚೇರಿ, ಸಮಾರಂಭ ಎಲ್ಲದಕ್ಕೂ ಸೂಕ್ತ ಆಗುವಂತಿದೆ. ಎಂಬ್ರಾಯಿಡರಿ ವಿನ್ಯಾಸ ಇರುವ ರೌಂಡ್ ನೆಕ್ ಶರ್ಟ್‌ಗಳು ಉದ್ದದ ಕುರ್ತಾ ಹಾಗೆಯೇ ಇದ್ದು ಮೊಣಕಾಲಿಗಿಂತ ಕೆಳಗೆ ಬರುತ್ತವೆ. ತಿಳಿ ಬಣ್ಣದ ಬಟ್ಟೆಯ ಮೇಲೆ ತೆಳ್ಳಗಿನ ಗೆರೆಗಳಿರುವ ಈ ಡ್ರೆಸ್‌ಗಳು ಹೆಂಗಳೆಯರ ಅಂದ ಇಮ್ಮಡಿಗೊಳಿಸುತ್ತವೆ. ಶಾಪಿಂಗ್, ಔಟಿಂಗ್, ಪಿಕ್‌ನಿಕ್ ಹೋಗಲು ಸೂಕ್ತ ಎನಿಸುವ 'ವಿ ನೆಕ್ ಪಿನ್ ಸ್ಟ್ರಿಪ್' ಶರ್ಟ್ ಡ್ರೆಸ್‌ಗಳು ಎಲ್ಲ ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ ಲಭ್ಯ.

ಬಜೆಟ್ ಫ್ರೆಂಡ್ಲಿ ಆಗಿರುವ ಪಾಪ್ಲಿನ್ ಕ್ಯಾಷುವಲ್ ಉಡುಪುಗಳು ನೀಲಿ ಮತ್ತು ಬಿಳಿ ಬಣ್ಣದ ಶೇಡ್‌ನಲ್ಲಿ ದೊರೆಯುತ್ತವೆ. ಬೆಲ್ಟ್ ಬದಲು ಇಲಾಸ್ಟಿಕ್ ಇರುವ ಈ ತರಹದ ಡ್ರೆಸ್‌ಗಳು ಕೂಡ ಚೆನ್ನಾಗಿ ಕಾಣಿಸುತ್ತವೆ. ■